## 'ಸ್ಟಾರ್' ಸಮರ

'ಸ್ಟಾರ್–ವಾರ್'ಗಳ ನಡುವೆ ನಿರ್ಮಾಪಕರು ಮಾತ್ರವಲ್ಲ ಇತರ ಕಲಾವಿದರೂ ಸೊರಗುವುದುಂಟು. ತೆಲುಗಿನ 'ಕಿಕ್' ಚಿತ್ರದ ಹಿಂದಿ ಅವತರಣಿಕೆಯಲ್ಲಿ ದೀಪಿಕಾ ಪಡುಕೋಣೆ ಜಾಗಕ್ಕೆ ಜಾಕ್ವಲಿನ್ ಫರ್ನಾಂಡಿಸ್ ಬಂದಿದ್ದಾರೆ. ಇದಕ್ಕೆ ಕಾರಣ ಸಲ್ಮಾನ್ ಖಾನ್ ಮತ್ತು ಶಾರೂಕ್ ಖಾನ್ ನಡುವಿನ ತಿಕ್ಕಾಟ. ಸಾಜಿದ್ ನಾಡಿಯದ್‌ವಾಲ ನಿರ್ದೇಶನದ ಈ ಚಿತ್ರಕ್ಕೆ ನಾಯಕಿಯಾಗಿ ಮೊದಲು ಆಯ್ಕೆಯಾಗಿದ್ದು ದೀಪಿಕಾ. ದೀಪಿಕಾ ಚಿತ್ರರಂಗಕ್ಕೆ ಬಂದದ್ದು ಶಾರೂಕ್ ಸಿನಿಮಾ ಮೂಲಕ. ಅಲ್ಲದೇ ಇಬ್ಬರೂ ಆತ್ಮೀಯರು. ಸಲ್ಮಾನ್ ಜೊತೆ ನಟಿಸಲು ದೀಪಿಕಾಗೂ ಕಾತರ. ಆದರೆ ಶಾರೂಕ್‌ಗೆ ಹತ್ತಿರವಿರುವ ಕಲಾವಿದರೊಂದಿಗೆ ತೆರೆ ಹಂಚಿಕೊಳ್ಳಲು ಸಲ್ಮಾನ್‌ಗೆ ಸುತಾರಾಂ ಇಷ್ಟವಿಲ್ಲ. ಹೀಗಾಗಿಯೇ ದೀಪಿಕಾ ಪಡುಕೋಣೆ ಸ್ಥಾನಕ್ಕೆ ಜಾಕ್ವಲಿನ್ ಬಂದಿದ್ದಾರೆ ಎನ್ನುವುದು ಬಾಲಿವುಡ್ ಗುಸುಗುಸು. ಯಶಸ್ಸಿನ ಉತ್ತುಂಗದಲ್ಲಿರುವ ಸಲ್ಮಾನ್ ಮುಟ್ಟಿದ್ದೆಲ್ಲ ಚಿನ್ನ. ಅವರ ಆಯ್ಕೆಯನ್ನು ನಿರ್ಮಾಪಕರು ಒಪ್ಪಿಕೊಳ್ಳಲೇಬೇಕು. ತಾರೆಯರ ಮುಸುಕಿನ ಗುದ್ದಾಟಕ್ಕೆ ಬೇರೆ ಕಲಾವಿದರು ಬಲಿಯಾಗುವುದು ಎಷ್ಟು ಸರಿ?



## ಬೇಕಿತ್ತಾ ಮಲ್ಲಿಕಾ?

'ಸೆಕ್ಸ್‌ಬಾಂಬ್' ಖ್ಯಾತಿಯ ಮಲ್ಲಿಕಾ ಶೆರಾವತ್ ಆ ಬಿರುದನ್ನು ಪರಮೋಚ್ಚ ಗೌರವ ಎಂದು ಭಾವಿಸಿರುವಂತಿದೆ! ಉತ್ತಮ ನಟಿ ಎಂದು ಹೆಸರು ಮಾಡದಿದ್ದರೂ ವಿವಾದಗಳಿಂದಲೇ ಸುದ್ದಿ ಮಾಡುತ್ತಿರುವ ಮಲ್ಲಿಕಾ ಈಗ ಬಾಲಿವುಡ್ ನಟಿಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಕಾನ್ ಚಿತ್ರೋತ್ಸವದ ಸಂದರ್ಭದಲ್ಲಿ ವಿದೇಶಿ ನಿಯತಕಾಲಿಕೆಯೊಂದಕ್ಕೆ ಮಲ್ಲಿಕಾ ನೀಡಿದ ಸಂದರ್ಶನ ತೀವ್ರ ಟೀಕೆಗೆ ಗುರಿಯಾಗಿದೆ. 'ಭಾರತ ಮಹಿಳೆಯರ ವಿಚಾರದಲ್ಲಿ ಪ್ರತಿಗಾಮಿಯಾಗುತ್ತಿದೆ' ಎಂಬ ಮಲ್ಲಿಕಾ ಹೇಳಿಕೆಯಂತೂ ಹಳೆಯ ಮತ್ತು ಹೊಸ ತಲೆಮಾರಿನ ನಟಿಯರನ್ನು ಕೆರಳಿಸಿದೆ. 'ಇದೇ ದೇಶವಲ್ಲವೇ ಮಲ್ಲಿಕಾರನ್ನು ಬೆಳೆಸಿದ್ದು, ಸ್ಟಾರ್‌ಗಿರಿ ಕೊಟ್ಟಿದ್ದು' ಎಂದು ನಟಿಯರು ಒಬ್ಬೊಬ್ಬರಾಗಿ ಮಲ್ಲಿಕಾ ಮೇಲೆ ಹರಿಹಾಯುತ್ತಿದ್ದಾರೆ. ಶೆರ್ಲಿನ್ ಚೋಪ್ರಾ, ಪೂನಮ್ ಪಾಂಡೆಯಂಥ ಹೊಸ ಬಾಂಬ್‌ಗಳೂ ಮಲ್ಲಿಕಾ ವಿರುದ್ಧ ಮಾತಿನ ಬಾಂಬ್ ಸಿಡಿಸಿದ್ದಾರೆ.

ಅಂದ ಹಾಗೆ, ಆ ಸಂದರ್ಶನದಲ್ಲಿ ಮಲ್ಲಿಕಾ ಹೇಳಿದ ಮಾತುಗಳು ಎಷ್ಟು ಹಾಸ್ಯಾಸ್ಪದವಾಗಿದೆ ನೋಡಿ– "ಭಾರತೀಯ ಚಿತ್ರರಂಗದಲ್ಲಿ ತೆರೆ ಮೇಲೆ ಚುಂಬಿಸಿದ್ದು ನಾನೇ ಮೊದಲು. ಬಿಕಿನಿ ತೊಟ್ಟ ಮೊದಲ ನಟಿಯೂ ನಾನೇ. ಜಾಕಿ ಚಾನ್‌ರ 'ದಿ ಮಿತ್' ಚಿತ್ರದ ತಾರಾಬಳಗಕ್ಕೆ ಆಯ್ಕೆಯಾದ ಮೊದಲ ನಟಿ ನಾನೇ"– ಹೀಗೆ ಆಕೆಯ ಸ್ವರತಿ ಸಾಗಿದೆ. ಈ ಬಾಲಿಶ ಹೇಳಿಕೆಗಳನ್ನು ನೀಡುವಾಗ ಮಲ್ಲಿಕಾ ಕಷ್ಟಪಟ್ಟು ಅಮೆರಿಕನ್ ಶೈಲಿಯ ಇಂಗ್ಲಿಷ್ ಉಚ್ಚರಿಸಲು ಪ್ರಯತ್ನಿಸುತ್ತಿದ್ದರಂತೆ!

■ ಅಮಿ

